ಸಂಜೆಯೊಳಗಾಗಲೀ ಅಥವಾ ನಾಳೆಯೊಳಗಾಗಲಿ ತಮ್ಮ ಸ್ವಯಂಪ್ರೇರಿತ ಹೇಳಿಕೆಯನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

(ಸದನವು ಮುಂದೂಡಿ ಪುನಃ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಮಧ್ಯಾಹ್ನ 3.20 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷ ಪೀಠವನ್ನು ಮಾನ್ಯ ಅಧ್ಯಕ್ಷರು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- (ಇ) ಅಧ್ಯಕ್ಷರ ಪೀಠದ ಎದಿರು ಇರತಕ್ಕ ಬಾಗಿಲನ್ನು ಮುಚ್ಚಿಸಿರುವ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ ಸದನವನ್ನು ಮುಂದೂಡಿದಾಗ ಮತ್ತೆ ಊಟದ ನಂತರ 3 ಗಂಟೆಗೆ ಸೇರೋಣ ಎಂದು ಹೇಳಿದ ಮೇಲೆ 3 ಗಂಟೆಗೆ ಸೇರಿದ್ದೇವೆ, ಆದರೆ ಈ ಸದನಕ್ಕೆ ಹೆಚ್ಚು ಸದಸ್ಯರುಗಳು ಇನ್ನೂ ಬಂದಿಲ್ಲ, ನಮ್ಮ ಸದಸ್ಯರುಗಳು ಎಲ್ಲಿ ಹೋಗಿದ್ದಾರೆ? ಮಂತ್ರಿಗಳು ಎಲ್ಲಿ ಹೋಗಿದ್ದಾರೆ? ಈ ರೀತಿಯಾದಂತಹ ಪರಿಸ್ಥಿತಿಯು ಉದ್ಭವವಾಗಬಾರದು. ನಿನ್ನೆಯ ದಿವಸ ಸದನವು ನಡೆಯುತ್ತಿರುವಂತಹ ಸಂದರ್ಭದಲ್ಲಿ ಸದನಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬರಬೇಕೆಂದು ಹೇಳಿದ್ದೆ. ಸುಮ್ಮನೆ ಮುಖ್ಯಕಾರ್ಯದರ್ಶಿಗಳು ಕೋರಿಕೆಗೆ ಬೆಳಿಗ್ಗೆ ಬಂದರು ಹೊರಟು ಹೋದರು. ಈಗಲೂ ಸಹ ಬಂದಿಲ್ಲ. ಮುಖ್ಯಮಂತ್ರಿಗಳು ಈ ಸದನದಲ್ಲಿ ಈಗ ಇಲ್ಲ, ನೀರಾವರಿಯ ಸಚಿವರು ಸಹ ಸದನದಲ್ಲಿ ಈಗ ಇಲ್ಲ. ಬೇರೆ ಸಚಿವರುಗಳು ಸಹ ಸದನದಲ್ಲಿ ಇಲ್ಲ ಅವರುಗಳು ಎಲ್ಲಿ ಹೋಗಿದ್ದಾರೋ ನನಗೆ ಗೊತ್ತಾಗಲಿಲ್ಲ. ಅಪರೂಪಕ್ಕೆ ನಮ್ಮ ಸದನಕ್ಕೆ ಸಂಸದೀಯ ವ್ಯವಹಾರಗಳ ಸಚಿವರು ಬಂದು ಕುಳಿತುಕೊಂಡಿರುವುದು ನಮ್ಮ ಸೌಭಾಗ್ಯ. ಏಕೆಂದರೆ ಅಪರೂಪಕ್ಕೆ ಬಂದಿದ್ದಾರೆ ಅವರಿಗೆ ಈ ಸದನ ಕಂಡರೆ ಆಗುವುದಿಲ್ಲ. ಅವರು ಏನು ಇದ್ದರೂ ಸಹ ವಿಧಾನ ಪರಿಷತ್ತಿನಲ್ಲಿಯೇ ಕುಳಿತುಕೊಳ್ಳುತ್ತಾರೆ. ನನಗೆ ಏನು ಒಂದು ಭಯ ಬಂದಿದೆ ಎಂದರೆ, ನಾನು ಇವತ್ತು ಗಮನಿಸಿದೆ, ಈ ಸದನಕ್ಕೆ ವಾಸ್ತು ಸರಿ ಇಲ್ಲವೋ ಏನೋ ಎನ್ನುವುದು ಅನುಮಾನ. ಏಕೆಂದರೆ ಈ ಸದನ ಮೂಲೆಯ ಬಾಗಿಲನ್ನು ತೆರೆದಿದ್ದೀರಿ ಇದು ಏಕೆ? ಅದನ್ನು ನೋಡಿ ನನಗೆ ಭಯ ಬಂದು ಬಿಟ್ಟಿತು. ನಾವು ಸದನಕ್ಕೆ ಮಧ್ಯದಲ್ಲಿರತಕ್ಕಂತಹ ಬಾಗಿಲಿನಿಂದ ನೇರವಾಗಿ ಬರುತ್ತಿದ್ದೆವು, ನೇರವಾಗಿ ಬರುವಾಗ ಏನೋ ಒಂದು ರೀತಿಯ ವಿಶೇಷವಾದಂತಹ ಶಕ್ತಿಯು ಕಾಣುತ್ತಿತ್ತು. ಈ ಮೂಲೆಯಲ್ಲಿ ಇರತಕ್ಕಂತಹ ಬಾಗಿಲನ್ನು ಶಾಸ್ತ್ರದವರು ಅಥವಾ ಮಾಯಮಂತ್ರದವರು ಏನಾದರೂ ಹೇಳಿ ತೆಗೆಸಿದಿರಾ? ಏನೂ ನನಗೆ ಗೊತ್ತಿಲ್ಲ. ಈ ಮೂಲೆಯ ಬಾಗಿಲನ್ನು ನನಗೆ ಗೊತ್ತಿರುವಂತೆ ತೆಗೆಸಬಾರದು. ಈ ಸದನದ ಮೂಲೆಯ ಬಾಗಿಲನ್ನು ತೆಗೆಸಿದರೆ ಬರಬೇಕು ಸದನಕ್ಕೆ ಎಂದು ಮನಸ್ಸು ಇದ್ದರೂ ಕೂಡ ಬರುವುದಕ್ಕೆ ಆಗುತ್ತಿಲ್ಲ ಮತ್ತೆ

ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕೆಂದು ಇದ್ದರೂ ಹೊಡ ಚರ್ಚೆ ಮಾಡುವುದಕ್ಕೆ ಮನಸ್ಸೇ ಬರುತ್ತಿಲ್ಲ ಆ ರೀತಿಯಾಗಿದೆ. ಇದರ ಬಗ್ಗೆ ಮಾನ್ಯ ಸಂಸದೀಯ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು:- ಇಲ್ಲ ಇದಕ್ಕೆ ನಾನೇ ಉತ್ತರವನ್ನು ಕೊಡುತ್ತೇನೆ. ಈ ಅಧಿವೇಶನ ಪ್ರಾರಂಭ ಮಾಡುವ ದಿವಸಕ್ಕಿಂತಲೂ ಮೊದಲು ನಾನು ಇಲ್ಲಿ ಎಲ್ಲಾ ಕಡೆಯಲ್ಲಿಯೂ ನೋಡಿಕೊಂಡು ಹೋದೆ. ನಾನು ಅಧ್ಯಕ್ಷರ ಪೀಠದಲ್ಲಿ ಕುಳಿತುಕೊಳ್ಳುತ್ತೇನೆ. ಕೆಲವು ಸದಸ್ಯರುಗಳು ನೇರವಾಗಿ ಇರತಕ್ಕಂತಹ ಬಾಗಿಲಿನಿಂದ ಸದನಕ್ಕೆ ಬರುತ್ತಾರೆ. ಅವರು ಬರತಕ್ಕಂತಹ ಸದಸ್ಯರಿಗೆ ಖಾಸಗಿಯಾಗಿ ಕರೆದು ಸದನಕ್ಕೆ ಯಾವ ರೀತಿಯಾಗಿ ಬರಬೇಕೆಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನೀವು ಆ ರೀತಿಯಾಗಿ ಹೇಳಿದ್ದಕ್ಕೆ ಅವರುಗಳು ಸದನಕ್ಕೆ ಬರುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ಏನು ಒಂದು ರೀತಿ ಮುಜಗರದಲ್ಲಿಯಾದರು ಬರುತ್ತಿದ್ದರು.

ಅಧ್ಯಕ್ಷರು:- ಈ ಸದನದ ಒಳಗಡೆಗೆ ಬರುವಾಗ ಒಂದು ರೀತಿಯಲ್ಲಿ ಗೌರವವಾಗಿ ಬರಬೇಕೆಂದು ಕರೆದು ಎಲ್ಲಾ ರೀತಿಯ ತಿಳುವಳಿಕೆಯನ್ನು ಕೊಟ್ಟೆ, ಅವರಿಗೆ ಅರ್ಥವಾಗಲಿಲ್ಲ. ಇನ್ನು ಏನು ಮಾಡುವುದು ಅವರಂತೂ ತಿಳಿದುಕೊಳ್ಳಲಿಲ್ಲವೆಂಬ ಈ ಸದನದ ಎದುರುಗಡೆಯ ಮಧ್ಯದಲ್ಲಿರತಕ್ಕಂತಹ ಬಾಗಿಲನ್ನು ಮುಚ್ಚಿಸಿ, ಮೂಲೆಯ ಬಾಗಿಲನ್ನು ತೆಗೆಸಿದೆ. ಮೂಲೆಯ ಕಡೆಯಿಂದ ಸದಸ್ಯರುಗಳು ಬರಲಿ ಎಂದು.

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ನಮ್ಮ ಸದಸ್ಯರು ಅಧ್ಯಕ್ಷರು ಪೀಠದಲ್ಲಿ ಕುಳಿತುಕೊಂಡಿರುವಾಗ ನಾವು ಯಾವ್ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬುದು ಸದಸ್ಯರುಗಳಲ್ಲಿ ಬರಬೇಕು. ಅದನ್ನು ಕಾನೂನಿನ ಪ್ರಕಾರವಾಗಿ ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ನಾನು ತಮಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, 1967ನೇ ಇಸವಿಯಿಂದಲೂ ನಾನು ಶ್ರೀ ಬಂಗಾರಪ್ಪನವರು, ಶ್ರೀ ನಂಜೇಗೌಡರು ಎಲ್ಲಾರು ಶಾಸಕರಾಗಿದ್ದು ಇಲ್ಲಿ ನಾವು ಕುಳಿತುಕೊಂಡಿರುವಾಗ ಚನ್ನಬಸವಪ್ಪನವರು, ಸಿದ್ಧವೀರಪ್ಪನವರು ಶಾಸಕರು ಎಂದರೆ ನಾವುಗಳೆಲ್ಲರೂ ಒಂದೆ. ಆದರೆ, ಚನ್ನಬಸವಪ್ಪನವರು, ಸಿದ್ಧವೀರಪ್ಪನವರು ಬರುತ್ತಿದ್ದಾರೆಂದರೆ ನಾವುಗಳು ಬಹಳ ಗೌರವದಿಂದ ಬಹಳ ದೂರದಲ್ಲಿಯೇ ಎದ್ದು ನಿಂತುಕೊಳ್ಳುತ್ತಿದ್ದೆವು. ಆ ರೀತಿಯಾದಂತಹ ಭಾವನೆಯು ಬೆಳೆಯಬೇಕು ಆ ರೀತಿಯಾಗಿ ಬೆಳೆಸಿಕೊಳ್ಳಬೇಕಾದುದು ಅವರಿಗೆ ಸೇರಿದಂತಹ ಕರ್ತವ್ಯ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು, ಈ ಸದನಕ್ಕೆ ನೇರವಾಗಿ ಬರಬೇಕಾದಂತಹ ಬಾಗಿಲು ಯಾವುದು, ಮತ್ತು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಯಾವ ಬಾಗಿಲಿನಿಂದ ಬರಬೇಕು ಎಂಬುದನ್ನು ಯೋಚಿಸಿಯೇ ಇಡಿಸಿದ್ದಾರೆ. ನೀವು ರಾಜ್ಯಪಾಲರ ಭಾಷಣದ ದಿವಸವಾದರೂ ಆ ಬಾಗಿಲನ್ನು ತೆರೆಯಬೇಕಾಗುತ್ತದೆ.

ಆದುದರಿಂದ ತಮ್ಮಲ್ಲಿ ನಾನು ಹೇಳುವುದೇನೆಂದರೆ ಮೂಲೆಯ ಬಾಗಿಲು ಸರಿ ಇಲ್ಲ ಎಂದು ಹೇಳುತ್ತೇನೆ, ಆದರೆ ಇದರ ಬಗ್ಗೆ ಶಾಸ್ತ್ರ ಹೇಳುತ್ತಿಲ್ಲ. ಶ್ರೀಮಾನ್ ಹನುಮಂತಯ್ಯನವರು ತೀರ್ಮಾನವನ್ನು ಮಾಡಿ ಎರಡು ಬಾಗಿಲು ಇಡಿಸಿದ್ದಾರೆ. ಮಧ್ಯೆ ಬಾಗಿಲಿನಿಂದ ಬರುವಾಗ ತಮಗೆ ತಮ್ಮ ಪೀಠಕ್ಕೆ ಅಗೌರವವನ್ನು ಉಂಟು ಮಾಡಬಾರದು ಅದು ಆ ರೀತಿಯಾದಂತಹ ಭಾವನೆಯು ಸಹ ಯಾರಿಗೂ ಬರಬಾರದು.

ಅಧ್ಯಕ್ಷರು:- ನನಗೆ ಏನು ಇಲ್ಲ ಈ ಸದನಕ್ಕೆ ಕೆಲವು ಸದಸ್ಯರು ಬರುವಾಗ ಅಖಾಡಕ್ಕೆ ಬರುವ ಹಾಗೆ ಬರುತ್ತಾರೆ.

ಶ್ರೀ ವಾಟಾಳ ನಾಗರಾಜ್:- ನಾನು ಅದನ್ನು ಒಪ್ಪುತ್ತೇನೆ, ಕೆಲವು ಸದಸ್ಯರು ಅಖಾಡಕ್ಕೆ ಬರುವ ಹಾಗೆ ಬರುತ್ತಾರೆ ಅದು ನಿಜ.

ಅಧ್ಯಕ್ಷರು:- ನನಗೆ ಏನಾಗುತ್ತದೆಂದರೆ, ಅವರು ಬಂದು ಪಕ್ಕಕ್ಕೆ ಹೋದರೆ ಚಿಂತೆ ಇಲ್ಲ. ನನಗೆ ಅವರು ಬರುವಾಗ ಅಷ್ಟೊಂದು ದೂರದಿಂದ ಬರುತ್ತಿದ್ದರೂ ಸಹ ಅವರು ಎಲ್ಲಿ ನನ್ನ ಮೈಮೇಲೆ ಬರುತ್ತಾರೆಂದು ಭಯ ಏಕೆಂದರೆ ಹೇಳಿಕೇಳಿ ನಾವು ಬ್ರಾಹ್ಮಣರು ಬೇರೆ. ನನಗೆ ಭಯ.

ಶ್ರೀ ವಾಟಾಳ ನಾಗರಾಜ್:- ದಿವಸಕ್ಕೆ ಮೂರು ಕೆ.ಜಿ.ಮಾಂಸವನ್ನು ತಿನ್ನುತ್ತೀರಿ. ಯಾವ ಬ್ರಾಹ್ಮಣರು ನೀವು? ಇದು ಒಳ್ಳೆಯ ಚೆನ್ನಾಗಿದೆ.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ ಕ್ಷೇತ್ರ):- ಮಾನ್ಯ ಅಧ್ಯಕ್ಷರೆ, ಒಳಗುಟ್ಟನ್ನು ಒಳಗಡೆಯಲ್ಲಿಯೇ ಇಟ್ಟುಕೊಳ್ಳಬೇಕು ಈ ಸದನದಲ್ಲಿ ಎಂದೂ ಹೇಳಬಾರದು.

ಶ್ರೀ ವಾಟಾಳ ನಾಗರಾಜ್:- ನೀವು ಮಾಂಸವನ್ನು ತಿನ್ನುತ್ತೀರಿ ನಿಮ್ಮನ್ನು ನಾವು ಬ್ರಾಹ್ಮಣರು ಎಂದು ಹೇಳಬೇಕಾ? ನೀವು ಬ್ರಾಹ್ಮಣರು ಅಲ್ಲಾ. ನಿಮ್ಮನ್ನು ಬ್ರಾಹ್ಮಣಿಕೆಯಲ್ಲಿ ಯಾರಾದರೂ ಇಟ್ಟಿದ್ದರೆ ಅವರಿಗೆ ಕೈಮುಗಿದು ಪ್ರಾರ್ಥನೆಯನ್ನು ಮಾಡಿ ಅವರನ್ನು ಬ್ರಾಹ್ಮಣರಿಂದ ತೆಗೆದು ಹಾಕಿ ಎಂದು ಕೇಳುತ್ತೇನೆ. ನೀವು ಬ್ರಾಹ್ಮಣರು ಎಂಬ ಪ್ರಶ್ನೆಯನ್ನು ಹೇಳುವುದಕ್ಕೆ ಹೋಗಬೇಡಿ. ಎಲ್ಲಾ ಗೊತ್ತಿದೆ. ನಿಮ್ಮನ್ನು ಯಾರು ಬ್ರಾಹ್ಮಣರು ಎಂದು ಹೇಳುವುದಕ್ಕೆ ಆಗುತ್ತದೆ. ನನಗೆ ಪತ್ರವನ್ನು ಏನೆಂದು ಬರೆಯುತ್ತೀರಾ ಎಂದರೆ ಮೈಸೂರಿನಿಂದ ಕೋಳಿಯ ಸಾರು ಬಂದಿದೆ ಊಟಕ್ಕೆ ಬರುತ್ತೀರಾ ನಿಮಗೆ ಧೈರ್ಯ ಇದೆಯಾ ಎಂದು. ಇದು ನನ್ನ ಹಣೆ ಬರಹ. ನಾನು ಬರುತ್ತೇನೆ ಅಥವಾ ಇಲ್ಲ ಎನ್ನುವ ಆಗಿಲ್ಲ.

ಅಧ್ಯಕ್ಷರು:- ನಿಮ್ಮ ಯೋಜನೆಯು ಸರಿ ಹೋಯಿತು. ಈಗ ಶ್ರೀ ವೀರಪ್ಪ ಮೊಯ್ಲಿಯವರು ಸದನಕ್ಕೆ ಬಂದರು. ಶ್ರೀ ವೀರಪ್ಪ ಮೊಯ್ಲಿಯವರು ಸದನಕ್ಕೆ ಬರುವವರೆಗೆ ಈ ಸದನವನ್ನು ನಡೆಸಬೇಕೆಂದು ಇತ್ತು. ಈಗ ಮೊಯ್ಲಿಯವರು ಬಂದಿರುವುದರಿಂದ ಅವರು ತಮ್ಮ ಮಾತನ್ನು ಶುರು ಮಾಡುತ್ತಾರೆ.

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಾನು ತಮಗೆ ಏನು ಹೇಳುವುದೆಂದರೆ....

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ನವರು ಹೇಳಿದ್ದರಲ್ಲಿ ಯಾವ್ಯಾವುದು ರೆಕಾರ್ಡ್‌ನಲ್ಲಿರಬೇಕು? ಯಾವ್ಯಾವುದು ರೆಕಾರ್ಡ್‌ನಲ್ಲಿ ಇರಬಾರದು.

ಶ್ರೀ ವಾಟಾಳ ನಾಗರಾಜ್:- ನಾನು ಸತ್ಯವನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಏನು ಮಾಂಸವನ್ನು ತಿನ್ನುವುದಿಲ್ಲವೇ? ಶ್ರೀ ಬಿ.ಎಸ್.ಯಡಿಯೂರಪ್ಪನವರೇ ನಾನು ನಿಮ್ಮ ಬಗ್ಗೆ ಹೇಳುತ್ತಿಲ್ಲ. ಎಲ್ಲಾರ ಬಗ್ಗೆ ಎಲ್ಲಾ ವಿಷಯವನ್ನು ಸತ್ಯವಾಗಿ ಹೇಳಿಬಿಟ್ಟರೆ ಉಳಿಯುವುದು ಹೇಗೆ ಎಂದು ಶ್ರೀ ಹೆಚ್.ಎನ್.ನಂಜೇಗೌಡರು ಹೇಳುತ್ತಾರೆ. ಅವರ ಬಗ್ಗೆ ಏನಾದರೂ ಹೇಳುತ್ತಿದ್ದೆನಾ? ಅವರ ಬಗ್ಗೆ ಹೇಳುವುದು ಬೇರೆ ಆದರೆ ಈ ಸದನದಲ್ಲಿ ಹೇಳುವುದು ಬೇಡ. ಇಲ್ಲಿ ಕೇಳಿಕೊಂಡು ಕುಳಿತುಕೊಳ್ಳುವುದು ಬೇಡ, ನಮಗೂ ಬೇಡ.

ಮಾನ್ಯ ಅಧ್ಯಕ್ಷರೆ, ಬಾಗಿಲ ವಿಚಾರದಲ್ಲಿ ತಮಗೆ ಹಾಸ್ಯವಾಗಿದ್ದರೂ ಕೂಡ ಪರಿಸ್ಥಿತಿಯನ್ನು ಮನವರಿಕೆಯನ್ನು ಮಾಡಿಕೊಟ್ಟಿದ್ದೇನೆ. ಆದುದರಿಂದ ಮೂಲೆಯಲ್ಲಿ ತೆರೆದಿರತಕ್ಕಂತಹ ಬಾಗಿಲನ್ನು ಮುಚ್ಚಿಸಿ, ಮಧ್ಯದಲ್ಲಿರತಕ್ಕಂತಹ ಬಾಗಿಲನ್ನು ತೆರೆಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ತಾವು ಯಾವುದೇ ಒಳ್ಳೆಯ ದೃಷ್ಟಿಯಿಂದಲೇ ಮಧ್ಯದಲ್ಲಿರತಕ್ಕಂತಹ ಬಾಗಿಲನ್ನು ಮುಚ್ಚಿ ಮೂಲೆಯಲ್ಲಿರತಕ್ಕಂತಹ ಬಾಗಿಲನ್ನು ತೆರೆಸಿದ್ದೀರಿ. ಆದರೆ ತಮ್ಮ ಪೀಠದ ಎದಿರುಗಡೆಯಿಂದ ಬಂದರೆ ಏನೋ ಒಂದು ರೀತಿಯ ಶೋಭೆ, ಒಂದು ರೀತಿಯಾದಂತಹ ಶಕ್ತಿ ಇರುತ್ತದೆ.

ಶ್ರೀ ವಾಟಾಳ ನಾಗರಾಜ್:- ಎದುಗಡೆಯಲ್ಲಿರುವ ಬಾಗಿಲಿನಿಂದ ಸದನಕ್ಕೆ ಬಂದರೆ ಸಭೆಗೆ ಒಂದು ರೀತಿಯ ಭೂಷಣ, ಒಂದು ಶಕ್ತಿ ಇರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಗೌರವವಾಗಿ ಇರುವವರು ಬರಲಿ, ಉಳಿದವರು ಆ ಕಡೆ ಈ ಕಡೆಯಲ್ಲಿರುವ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರುಗಳು ಬರತಕ್ಕಂತಹ ಬಾಗಿಲು ಕಡೆಯಿಂದಲೇ ಬರುವಂತಹ ವ್ಯವಸ್ಥೆಯನ್ನು ಮಾಡೋಣ. ಮಧ್ಯದಲ್ಲಿರತಕ್ಕಂತಹ ಬಾಗಿಲನ್ನು ತೆರೆಸಿ. ಸದಸ್ಯರುಗಳಿಗೆ ಅಕ್ಕಪಕ್ಕದಲ್ಲಿರತಕ್ಕಂತಸ ಬಾಗಿಲು ಕಡೆಯಿಂದ ಬನ್ನಿ ಎಂದು ಹೇಳೋಣ.

ಅಧ್ಯಕ್ಷರು:- ಆಗಲಿ, ಆ ರೀತಿಯಾಗಿಯೇ ಆಗಲಿ. ನಿಮ್ಮ ಎಲ್ಲಾರ ಅಭಿಪ್ರಾಯಕ್ಕೆ ನಾನು ತಲೆ ಬಾಗುತ್ತೇನೆ.

ಶ್ರೀ ವಾಟಾಳ ನಾಗರಾಜ್:- ತಾವು ಮೊದಲು ಹೇಳಿದಂಥದ್ದು ಸತ್ಯವಾಗಿರತಕ್ಕಂಥದ್ದು. ಇದರಿಂದಲಾದರೂ ನಾವುಗಳು ಮೊದಲು ಪಾಠವನ್ನು

ಕಲಿಯೋಣ. ನಾವೆಲ್ಲರೂ ಸದಸ್ಯರು ಸದನದೊಳಗೆ ಯಾವ ರೀತಿಯಾಗಿ ಬರಬೇಕು ಎನ್ನತಕ್ಕಂತಹ ಪಾಠವನ್ನು ಕಲಿಯೋಣ. ಮೊದಲನೆಯದಾಗಿ ನಾವು ಪಾಠವನ್ನು ಕಲಿಯಬೇಕಾಗಿರುವುದು, ಈ ಸದನಕ್ಕೆ ಯಾವುದೇ ಪಕ್ಷದವರಾಗಿರಲಿ ನಮ್ಮನ್ನು ಜನರು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಬಂದು ಸಾಯಂಕಾಲ 6 ಗಂಟೆಗೆಯವರೆಗೂ ಸದನದಲ್ಲಿ ನಡೆಯುವ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯ. ಆ ರೀತಿಯಾಗಿ ಭಾಗವಹಿಸಲಿಲ್ಲ ಎಂದರೆ ನಾವು ಒಂದು ರೀತಿಯಲ್ಲಿ ಲೋಪವನ್ನು ಮಾಡಿದ ಹಾಗೆ ಎನ್ನತಕ್ಕ ಥದ್ದು ನನ್ನ ಮನಸ್ಸು, ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾತನಾಡುತ್ತಾ ಏನು ಹೇಳಿದರು ಎಂದರೆ ಸದನದಲ್ಲಿ ನಡೆಯುವ ಕಾರ್ಯಕಲಾಪವನ್ನು ಸಾರ್ವಜನಿಕರು ನೋಡುವುದಕ್ಕೆ ವೀಡಿಯೋ ಕ್ಯಾಮರದ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದರು. ಖರ್ಚಾದರೂ ಚಿಂತೆ ಇಲ್ಲ ಅದನ್ನು ವ್ಯವಸ್ಥೆ ಮಾಡಬೇಕು. ಏಕೆಂದರೆ ಈ ರಾಜ್ಯದ ಜನತೆ ಸಂಜೆ 7 ಗಂಟೆಗೆ ಒಂದು ಸಾರಿ ನೋಡಿದ ತಕ್ಷಣ ನಾವು ಓಟು ಕೊಟ್ಟು ಕಳುಹಿಸಿದಂತಹ ಸದಸ್ಯರು ಎಲ್ಲಿದ್ದಾರೆಂದು ಹುಡುಕುತ್ತಾರೆ. ಆ ರೀತಿಯಾಗಿ ಹುಡುಕುವುದಕ್ಕಾಗಿಯಾದರೂ ಖರ್ಚು ಎಷ್ಟಾದರೂ ಆಗಲಿ ಯಾವುದಾದರೂ ಇಲಾಖೆಯ ಹಣದಲ್ಲಿ ಕಡಿಮೆ ಮಾಡಿ...

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಅದರಲ್ಲಿಯೂ ಅನ್ಯಾಯವನ್ನು ಮಾಡುತ್ತಾರೆ, ಮುಂದಿನ ಬೆಂಚಿನಲ್ಲಿರತಕ್ಕಂತಹ ಸದಸ್ಯರುಗಳನ್ನೇ ವಿಡಿಯೋ ತೆಗೆಯುವವರು ತೋರಿಸುತ್ತಾರೆ. ಏಕೆಂದರೆ ಮಾತನಾಡಬೇಕು ಎಂದರೆ ತಾವು ಮುಂದಿನ ಬೆಂಚಿನವರಿಗೆ ಅವಕಾಶವನ್ನು ಕೊಡುತ್ತೀರಿ, ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ನಿಜ. ನಿಮಗೆ ನನ್ನ ಬಗ್ಗೆ ಒಂದು ರೀತಿಯ ಹೊಟ್ಟೆಯ ಕಿಚ್ಚು ಬಂದಿರಬಹುದು.

ಶ್ರೀ ಹೆಚ್.ಶಿವಪ್ಪ:- ಆಗ ನಮ್ಮ ಕ್ಷೇತ್ರ ಜನರು ನೀವು ಸದನಕ್ಕೆ ಹೋಗಿ ಮಾತನಾಡುವುದೇ ಇಲ್ಲ ಎಂದು ನಮ್ಮನ್ನು ಬೈಯ್ಯುತ್ತಾರೆ. ನೀವು ಎಲ್ಲಿ ಇರುತ್ತೀರಿ ಎಂದು ಕೇಳುತ್ತಾರೆ. ಏಕೆಂದರೆ ಟಿ.ವಿ.ಯಲ್ಲಿ ನೋಡಿದಾಗ ಶ್ರೀ ವಾಟಾಳ್ ನಾಗರಾಜ್‌ರವರೇ ಬರುತ್ತಿರುವುದರಿಂದ, ನೀವು ಎಲ್ಲಿ ಹೋಗಿದ್ದೀರಿ ಸದನದಲ್ಲಿ ಇದ್ದಿರೋ ಅಥವ ಎಲ್ಲಿಯಾದರೂ ಹೋಗಿದ್ದಿರಾ? ಎಂದು ಕೇಳುತ್ತಾರೆ.

ಅಧ್ಯಕ್ಷರು:- ಯಾರು ಕೇಳುತ್ತಾರೆ ಗೊತ್ತೇ? ಟಿ.ವಿ.ಯನ್ನು ಮನೆಯವರು ನೋಡುತ್ತಿರುತ್ತಾರಲ್ಲ ಅವರು ಕೇಳುತ್ತಾರೆ. ಮನೆಯವರದು ತಾನೇ ಗಲಾಟೆನಯನ್ನು ಮಾಡುವುದು.

(ಗೊಂದಲ)

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದುದು ನಿಜ.

ಏಕೆ ಟಿ.ವಿ.ಯಲ್ಲಿ ಜಾಸ್ತಿಯಾಗಿ ನನ್ನ ಬಗ್ಗೆ ಬರುತ್ತದೆಂದರೆ ಶ್ರೀ ಯಡಿಯೂರಪ್ಪನವರು ಮತ್ತು 36 ಜನ ಸದಸ್ಯರು. ಮತ್ತು ವಾಟಾಳ್ ನಾಗರಾಜ್ ಈ ರೀತಿಯಾಗಿ ಆಗುತ್ತದೆ. ಇದನ್ನು ಏನು ಮಾಡುವುದಕ್ಕೆ ಆಗುವುದಿಲ್ಲ. ಯಾರು ಯಾರದು ಫೋಟೋ ಬರಬೇಕು ಎಂಬುದು ಗೊತ್ತು. ಯಾರು ಯಾರು ಚಳುವಳಿ ಮಾಡುತ್ತಾರೆ, ಹೋರಾಟವನ್ನು ಮಾಡುತ್ತಾರೆ ಅಂತಹ ಸದಸ್ಯರ ಫೋಟೋಗಳು ಬಂದೇ ಬರುತ್ತದೆ. ಅದು ಬರದೇ ಇರುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಅರಗಜ್ಞಾನೇಂದ್ರ:- ನಿಮಗಿಂತಲೂ ನಾವು ಏನು ಕಡಿಮೆ ಇಲ್ಲ. ಆದರೆ ನಮಗೆ ಟೈಮ್ ಸಿಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅದನ್ನು ಇಲ್ಲಿಗೆ ಮುಗಿಸಿ, ಕಾವೇರಿಯ ಇಷ್ಯೂ ಬಗ್ಗೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಮ್ಮ ಅನೇಕ ಸ್ನೇಹಿತರು ಈ ಸದನಕ್ಕೆ ಒಂದೆರಡು ದಿವಸಗಳ ಕಾಲ ಬಹಿಷ್ಕಾರವನ್ನು ಹಾಕಿ ಹೋಗಿದ್ದಾಗ, ಕೆಲವು ಸ್ನೇಹಿತರು ಏನು ಹೇಳಿದರು ಎಂದರೆ ಏನು ತಾವು ಸದನದೊಳಗೆ ಇಲ್ಲದಿದ್ದರೆ ಅದು ಎಂತಹ ಸದನ ಎಂದು ಹೇಳಿದಂತಹ ಸ್ನೇಹಿತರುಗಳು ಇವರೇ. ಕೊನೆಗೆ ಎಲ್ಲಾವನ್ನು ನೀವೇ ತೆಗೆದುಕೊಳ್ಳುತ್ತೀರಿ ಎಂದು ಹೇಳತಕ್ಕಂಥವರುಗಳು ಇವರೇ. ಅದರಿಂದ ಎರಡು ರೀತಿಯಲ್ಲಿ ಮಾತನಾಡುತ್ತಾರೆ. ಅದಕ್ಕೋಸ್ಕರವಾಗಿ ಅದನ್ನು ಬಿಟ್ಟು ಬಿಡೋಣ. ಅದರ ಬಗ್ಗೆ ಚಿಂತೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಈ ಬಾಗಿಲನ್ನು ತೆರೆಸಿರಿ.

ಅಧ್ಯಕ್ಷರು:- ಈಗ ಎರಡು ಉದ್ದೇಶಗಳೂ ಸಾಧನೆಯಾದವು. ನಾನು ಏತಕ್ಕೆ ಅದನ್ನು ಮುಚ್ಚಿಸಿದ್ದೆ ಎಂಬುದನ್ನು ಹೇಳಿದ್ದೂ ಆಯಿತು, ಮತ್ತು ನಿಮ್ಮ ಮಾತಿಗೆ ಬೆಲೆಯನ್ನೂ ಕೊಟ್ಟಿದ್ದೂ ಆಯಿತು. ಮಾನ್ಯ ಸದಸ್ಯರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದಲೇ ನಾನು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ. ಮಧ್ಯಾಹ್ನದ ಹೊತ್ತು ಊಟಕ್ಕೆ ತೊಂದರೆ ಆಗುತ್ತದೆಂಬ ಉದ್ದೇಶದಿಂದ ಕಾಮತ್ ಯಾತ್ರಿ ನಿವಾಸ್‌ದವರಿಗೆ ಹೇಳಿ ಊಟದ ವ್ಯವಸ್ಥೆ ಮಾಡಿಸಿ ಅವರಿಗೆ ಸಬ್ಸಿಡಿಯನ್ನೂ ಕೊಡುತ್ತಿದ್ದೇವೆ. ರಾತ್ರಿಯ ಹೊತ್ತು ಸ್ವಲ್ಪಮಟ್ಟಿಗೆ ಓದಿಕೊಳ್ಳುವುದಕ್ಕೆ ಮತ್ತು ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಲಿ ಎಂದು ರಾತ್ರಿ 9 ಗಂಟೆಯ ನಂತರ ಯಾರೂ ವಿಸಿಟರ್ಸ್ ಬರಬಾರದೆಂದು ಶಾಸಕರ ಭವನದಲ್ಲಿ ರಿಸ್ಟ್ರಿಕ್ಟ್ ಮಾಡಿದ್ದೇವೆ. ಬೆಳಿಗ್ಗೆ 7 ಗಂಟೆಗಿಂತ ಮೊದಲು ಯಾರೂ ಬರಬಾರದೆಂದು ಅದಕ್ಕೂ ವ್ಯವಸ್ಥೆ ಮಾಡಿದ್ದೇವೆ. ಈಗ ಅಲ್ಲೇ ಒಂದು ಬುಕ್ ಸ್ಟೋರ್ಸ್‌ನ್ನು ವ್ಯವಸ್ಥೆ ಮಾಡಿಸಿದ್ದೇವೆ. ಅದೇ ರೀತಿ ಮೆಡಿಕಲ್ ಸ್ಟೋರ್ಸ್, ತರಕಾರಿ ಅಲ್ಲೇ ಸಿಕ್ಕುತ್ತದೆ. ಎಲ್ಲ ರೀತಿಯಲ್ಲೂ ಸದಸ್ಯರ ಜೊತೆ ಸಹಕರಿಸಬೇಕೆಂದು ಅವರಿಗೆ ಬೇಕಾದ ಎಲ್ಲ ಅನುಕೂಲಗಳನ್ನೂ ಏರ್ಪಾಡು ಮಾಡಿಕೊಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆ.

ಪ್ರತಿಯೊಬ್ಬ ಶಾಸಕರಿಗೂ ಒಬ್ಬೊಬ್ಬ ಆಪ್ತ ಸಹಾಯಕರನ್ನು ಒದಗಿಸಿಕೊಡುವುದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಬಹುಶಃ ಅದೂ ಕೂಡ ಇನ್ನು 4-5 ದಿನದಲ್ಲಿ ಅನೌನ್ಸ್ ಮಾಡುತ್ತೇವೆ. ನನಗೆ ಆಗುತ್ತಿರುವಂಥ ವ್ಯಥೆಯಾದರೂ ಏನೆಂದರೆ ಇಷ್ಟೊಂದು ಅನುಕೂಲಗಳನ್ನೂ ಮಾಡಿಕೊಟ್ಟಮೇಲೆ ಶಾಸಕರಾದವರು ಇಲ್ಲಿಗೆ ಬರಬೇಕಲ್ಲವೇ? ಸದಸ್ಯರುಗಳು ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮ್ಮ ವಿನಂತಿ ಏನೆಂದರೆ, ಸರ್ಕಾರವನ್ನು ನಡೆಸುವಂಥವರ ಕಡೆಯಿಂದ ಸಭೆಯನ್ನು ನಡೆಸುವುದಕ್ಕೆ ಬೇಕಾದಂಥ ಕನಿಷ್ಠ ಕೋರಂ ಆದರೂ ಇರಬೇಕಲ್ಲವೇ?

ಅಧ್ಯಕ್ಷರು:- ಸರ್ಕಾರ, ವಿರೋಧಪಕ್ಷ ಎಂದು ನಾನು ಹೇಳುತ್ತಿಲ್ಲ. ಇಡೀ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆದರೆ ಹೆಚ್ಚಿನ ಜವಾಬ್ದಾರಿ ಅವರಮೇಲಿದೆ.

ಅಧ್ಯಕ್ಷರು:- ಎಲ್ಲ ಮಾನ್ಯ ಸದಸ್ಯರೂ ಬಂದು ಸಹಕರಿಸಬೇಕು. ಸದನದ ಕಾರ್ಯ ಕಲಾಪಗಳಲ್ಲಿ ಪಾಲ್ಗೊಳ್ಳಬೇಕು. ಪ್ರಶ್ನೋತ್ತರ ವೇಳೆಗಿಂತ ಹೆಚ್ಚಿಗೆ ಟೈಂ ಆಗುತ್ತಿದೆ ಎಂದು ಹೇಳಿದರೂ ಕೂಡ, ಕೆಲವರು ಎಂದೂ ಎದ್ದೇಳದೆ, ಪ್ರಶ್ನೆಯನ್ನು ಕೇಳದೇ ಇದ್ದವರೂ ಎದ್ದು ಪ್ರಶ್ನೆಯನ್ನು ಕೇಳುತ್ತಿದ್ದಾರೆಂಬ ಕಾರಣದಿಂದ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಸದನದ ನಿಯಮಗಳನ್ನು ಮೀರಿದರೂ ಅವರು ಮಾತನಾಡುವುದಕ್ಕೆ ಧೈರ್ಯ ಬರಲಿ, ಮಾತನಾಡಲಿ ಎಂದು ಅವರು ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಎಲ್ಲ ಮಾನ್ಯ ಸದಸ್ಯರೂ ಇದನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್.ಶಿವಪ್ಪ:- ಕಿರಿಯರಾದ ನಮಗೆ ಜಾಸ್ತಿ ಅವಕಾಶ ಕೊಡಬೇಕು. ನಾವು ಇನ್ನೂ ಮಾತನಾಡಬೇಕು, ಚರ್ಚೆಯಲ್ಲಿ ಭಾಗವಹಿಸಬೇಕು ಎಂಬ ತಮ್ಮ ನಿರೀಕ್ಷೆ ಏನಿದೆ....

ಅಧ್ಯಕ್ಷರು:- ನೀವೂ ಹಿರಿಯರ ಲಿಸ್ಟ್‌ನಲ್ಲೇ ಬರುತ್ತೀರಿ. ಕಿರಿಯರ ಲಿಸ್ಟ್‌ಗೆ ಏತಕ್ಕೆ ಹೋಗುತ್ತೀರಿ? ನೀವು ನಿಂತೇ ಇರುತ್ತೀರಿ. ನಿಮ್ಮನ್ನು ಕೂಡಿಸುವುದೇ ಕಷ್ಟವಾಗುತ್ತಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾವೆಲ್ಲರೂ ಕಿರಿಯರು.

ಅಧ್ಯಕ್ಷರು:- ನೀವು ಬಹಳ ಹಿರಿಯರು. ಮಾನ್ಯ ವೀರಪ್ಪಮೊಯ್ಲಿಯವರು ತಮ್ಮ ಭಾಷಣವನ್ನು ಮುಂದುವರೆಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಯವರು ಬಂದಿರುವುದರಿಂದ ಡಾ.ಚಿತ್ತರಂಜನ್ ವಿಚಾರವನ್ನು ಇವತ್ತು ತೆಗೆದುಕೊಳ್ಳೋಣ, ಇಲ್ಲದಿದ್ದರೆ ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು:- ನಾಳೆ ತೆಗೆದುಕೊಳ್ಳೋಣ. ಈಗ ಮೊಯ್ಲಿಯವರು ಕಾವೇರಿ ವಿಚಾರದ ಬಗ್ಗೆ ತಯಾರಾಗಿ ಬಂದಿದ್ದಾರೆ. ಅವರು ಮುಗಿಸಲಿ. ಅವರು ಹಿರಿಯ ಸದಸ್ಯರಿದ್ದು ನಿಂತಿದ್ದಾರೆ. ಮೊದಲು ಅವರು ಮುಗಿಸಲಿ. ನಿಮಗೂ ಗೊತ್ತಿದೆ. ಅವರು ಬಹಳ ಧಾರಾಳಿಗಳು, ಈ ಮುಖ್ಯಮಂತ್ರಿಯವರು ಸಹೃದಯಿಗಳು. ನಿಮಗೆ ಯಾವುದೂ ಅಡ್ಡ ಇಲ್ಲ. ಯಾವಾಗ ಬೇಕಾದರೂ ಪ್ರಸ್ತಾಪ ಮಾಡಬಹುದು. ನಿಜ ಹೇಳುವುದಾದರೆ, ಇಷ್ಟೊಂದು ಸಲಿಗೆ ಇರತಕ್ಕವರು ಸಿಕ್ಕಿರತಕ್ಕದ್ದು.

ಶ್ರೀ ವಾಟಾಳ ನಾಗರಾಜ್:- ತಾವು ಹೇಳುತ್ತಿರುವುದು ಸತ್ಯ. ಇದರಲ್ಲಿ ಏನೂ ಅನುಮಾನ ಇಲ್ಲ. ನಮ್ಮ ವಿರೋಧಪಕ್ಷದವರೆಲ್ಲರ ಮಾತಿಗೂ ಬೆಲೆ ಕೊಟ್ಟು ವಿದ್ಯುಚ್ಛಕ್ತಿ ಬೆಲೆಏರಿಕೆ ಬಗ್ಗೆ ಸಮಿತಿ ಮಾಡಿದರು. ಬೇರೆ ಯಾರಾದರೂ ಆಗಿದ್ದಿದ್ದರೆ ಇದನ್ನು ಮಾಡುತ್ತಿರಲಿಲ್ಲ ಎಂದು ನಾವು ಅಂದುಕೊಂಡಿದ್ದೆವು. ಇದು ಅವರ ಧಾರಾಳತನ.....

ಅಧ್ಯಕ್ಷರು:- ಅದಕ್ಕಿಂತ ಮುಖ್ಯವಾಗಿ ನಮ್ಮ ಜೊತೆಯಲ್ಲಿ ಸದಸ್ಯರಾಗಿದ್ದು ಅಕಾಲ ಮರಣಕ್ಕೆ ದುರ್ಮರಣಕ್ಕೆ ಈಡಾದಂಥ ಮಾನ್ಯ ಡಾ:ಚಿತ್ತರಂಜನ್‌ರವರ ವಿಚಾರವನ್ನು ಪ್ರಸ್ತಾಪ ಮಾಡುವ ವಿಚಾರಕ್ಕೆ ಮೊದಲ ಪ್ರಿಯಾರಿಟಿ ಬರುತ್ತದೆ. ಈ ವಿಚಾರವನ್ನು ನಾನು ಮಾನ್ಯ ಸಭಾ ನಾಯಕರು ಇದ್ದಾಗ ಪ್ರಸ್ತಾಪ ಮಾಡಿ ಎಂದು ಪ್ರತಿಪಕ್ಷದ ನಾಯಕರಿಗೆ ಹೇಳಿದ್ದೆ. ಮಾನ್ಯ ಮೊಯ್ಲಿಯವರು ಕಾವೇರಿ ವಿಚಾರವನ್ನು ಅರ್ಧಕ್ಕೇ ನಿಲ್ಲಿಸಿದ್ದರು ಈಗ ಅವರು ಬಂದಿದ್ದಾರೆ ಅವರ ಭಾಷಣವನ್ನು ಮುಂದುವರೆಸಲಿ.

ಶ್ರೀ ವಾಟಾಳ ನಾಗರಾಜ್:- ಆಗಲಿ ಆದರೆ ಮಾನ್ಯ ಮೊಯ್ಲಿಯವರು ಪ್ರಾರಂಭ ಮಾಡಿದ ಮೇಲೆ ನಾವು ಹೇಳುವುದಕ್ಕೆ ಅವಕಾಶವಾಗುವುದಿಲ್ಲ. ಏಕೆಂದರೆ ಸಂಜೆಯಾಗುತ್ತದೆ.

ಅಧ್ಯಕ್ಷರು:- ನಾಳೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾಳೆ ಇದಕ್ಕೆ ಒಂದು ಟೈಮ್‌ನ್ನು ನಿಗದಿಮಾಡಿ ಅವಕಾಶ ಕೊಡಿ. ಇಲ್ಲದಿದ್ದರೆ ಇದರ ಪ್ರಾಮುಖ್ಯತೆ ಹೋಗುತ್ತದೆ. ಪ್ರಶ್ನೋತ್ತರ ವೇಳೆ ಎಂದು ಎಲ್ಲರೂ ಒಪ್ಪಿಕೊಂಡರು. ಅದನ್ನೇ ಪ್ರತಿನಿತ್ಯ ಮಾಡಿದರೆ....

ಅಧ್ಯಕ್ಷರು:- ಮಾನ್ಯ ಸಭಾ ನಾಯಕರು ನಾಳೆ ಇರುತ್ತಾರೆ. ಅವರ ಜೊತೆ ಚರ್ಚೆ ಮಾಡಿ ಅವರು ಇರುವ ಸಮಯದಲ್ಲಿ ಮಾಡೋಣ. ಇವತ್ತು ನಾಳೆಯಲ್ಲಿ ವ್ಯತ್ಯಾಸ ಏನೂ ಆಗುವುದಿಲ್ಲ. ನಾಳೆ ಮಾಡಿಸೋಣ.

4. ನಿಯಮ 159ರ ಮೇರೆಗೆ

ವಿಷಯ:- ತಮಿಳ್ನಾಡಿಗೆ ಕಾವೇರಿ ನೀರನ್ನು ಬಿಟ್ಟ ವಿಚಾರ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

+ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕೆಲವು